॥ ಕೃಷ್ಣಂ ವಂದೇ ಜಗದ್ಗುರುಂ ॥

# ಕಾಕೋಳು ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್ (ರಿ.)


ಕಾಕೋಳು ಕ್ಷೇತ್ರ, ದೊಡ್ಡಬಳ್ಳಾಪುರ ರಸ್ತೆ, ರಾಜಾನುಕುಂಟೆ ಸಮೀಪ, ಯಲಹಂಕ ತಾ॥, ಬೆಂಗಳೂರು-560089.

ದೂ: 63642 59787/ 98450 75250 / 97393 69621

ಇ-ಮೇಲ್ : kakolu.krishna@gmail.com । ಬ್ಲಾಗ್‌ಸ್ಪಾಟ್ : kakolukrishna.blogspot.com

www.facebook.com/kakolukrishna








ಪಾಂಚಜನ್ಯ ಸುದರ್ಶನಾದಿಶೋಭಿತ । ಚತುರಹಸ್ತ ನಿರುಪಮಾನ ಶ್ರೀರಮಣ ॥
ಪರಮಪುರುಷ ಶ್ರೀಪಾದರಾಜಗೊಲಿದ । ವೇಣುಗೋಪಾಲ ಕಾಕೋಳು ಕೃಷ್ಣ ಸಿರಿಭೂಷಣ ॥

## ಬ್ರಹ್ಮರಥೋತ್ಸವ

91ನೇ ವಸಂತದ ಸಂಭ್ರಮ

ಅಷ್ಟಮಿಪ್ರಿಯನ ಅವಿಸ್ಮರಣೀಯ ಉತ್ಸವ...

ಶ್ರೀ ಕ್ರೋಧಿನಾಮ ಸಂವತ್ಸರದ
ಹಾರ್ದಿಕ ಶುಭಾಶಯಗಳೊಂದಿಗೆ

## ಸರ್ವರಿಗೂ ಆತ್ಮೀಯ ಆಮಂತ್ರಣ

**11.04.2024 ರಿಂದ 17.04.2024**

ತೆರೆದ-ಅಂಚೆ

ಶ್ರೀಮತಿ/ಶ್ರೀ ______________________

______________________

______________________

## ಪರಮಾಪ್ತ ಸದ್ಭಕ್ತರೇ,

ಪುಣ್ಯ-ಜ್ಞಾನ ಸಂಪಾದನೆಯ ಕೇಂದ್ರಬಿಂದುವೇ ದೇವಾಲಯಗಳು. ಈ ನಿಟ್ಟಿನಲ್ಲಿ ಬೆಂಗಳೂರಿನ ಹೊರವಲಯದ ದೊಡ್ಡಬಳ್ಳಾಪುರ ರಸ್ತೆಯ ರಾಜಾನುಕುಂಟೆ ಸಮೀಪದ ಪೌರಾಣಿಕ ಹಿನ್ನೆಲೆಯ ಕಾಕೋಳು ಕ್ಷೇತ್ರದಲ್ಲಿ ದಾಸಸಾಹಿತ್ಯ ಆದ್ಯಪ್ರವರ್ತಕ ಶ್ರೀ ಶ್ರೀಪಾದರಾಜರಿಂದ ಪ್ರತಿಷ್ಠಾಪಿತ ಬೃಂದಾವನದಲ್ಲಿರುವ ಚತುರ್ಭುಜ ಶ್ರೀ ವೇಣುಗೋಪಾಲಸ್ವಾಮಿಯ ಮತ್ತು ಶ್ರೀವ್ಯಾಸರಾಜರಿಂದ ಸ್ಥಾಪಿತ ಶೀಘ್ರವರಪ್ರದ ಕಂಬದ ಆಂಜನೇಯಸ್ವಾಮಿಯ ಜಾಗೃತ ಸನ್ನಿಧಾನದಿಂದ ನಂಬಿ ಬರುವ ಆಸ್ತಿಕ ಭಕ್ತರ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದೆ.



ಮೂಲ ವಿಗ್ರಹಗಳ ಪುನರ್ ಪ್ರತಿಷ್ಠಾಪನೆಯ ಸಂಸ್ಮರಣಾರ್ಥವಾಗಿ ಆಚರಿಸುವ ಬ್ರಹ್ಮರಥೋತ್ಸವ ಪರಂಪರೆಗೆ ಇದೀಗ **91ನೇ ವಸಂತದ ಸಂಭ್ರಮ.**

ಕಾಕೋಳು ಕ್ಷೇತ್ರದ ಗ್ರಾಮಸ್ಥರೂ ಸೇರಿದಂತೆ 4 ತಲೆಮಾರಿನ ಭಕ್ತ ಜನರು ಈ ಉತ್ಸವಕ್ಕೆ ಸಾಕ್ಷಿಯಾಗಿ ಹಲವು ಧಾರ್ಮಿಕ – ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ ಮುನ್ನಡೆಸುತ್ತಿದ್ದಾರೆ.



ನಾಡಿನ ಧಾರ್ಮಿಕ-ಸಾಂಸ್ಕೃತಿಕ ಕ್ಷೇತ್ರದ ಖ್ಯಾತನಾಮ ಗಣ್ಯರ ಉಪಸ್ಥಿತಿಯಲ್ಲಿ ಆಗಮೋಕ್ತ ರೀತಿಯಲ್ಲಿ ಅರ್ಥಪೂರ್ಣವಾಗಿ ಹಲವು ವಿಶಿಷ್ಟ ಗಾನ – ಜ್ಞಾನ ; ಯಜ್ಞ – ಉತ್ಸವಗಳಿಂದ ವಿಜೃಂಭಣೆಯಿಂದ ನಡೆಯುವ ಕಾರ್ಯಕ್ರಮಗಳಿಗೆ ಸಹೃದಯ ಭಕ್ತಾದಿಗಳು ತನು, ಮನ, ಧನ ಸಹಕಾರ ನೀಡುವ ಮೂಲಕ ನವನೀತಪ್ರಿಯನ ಉತ್ಸವದಲ್ಲಿ ಪಾಲ್ಗೊಳ್ಳಲು ಸವಿನಯ ಆಹ್ವಾನ.

ಆಗಮೀಕರು :
ಪಾಂಚರಾತ್ರಾಗಮ ಪ್ರವೀಣ, ವಿದ್ವಾನ್
ಡಾ. ಜಿ. ಶ್ರೀನಿವಾಸ ರಾಘವನ್, ದೊಡ್ಡಬಳ್ಳಾಪುರ

ತಮ್ಮನ್ನು ಆದರದಿಂದ ಸ್ವಾಗತಿಸುವ :
ಕಾಕೋಳು ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ
ಟ್ರಸ್ಟ್‌ನ ಸದಸ್ಯರು ಹಾಗೂ ಗ್ರಾಮಸ್ಥರು

---


### ಕಾಕೋಳು ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್ (ರಿ.) – ವಿಶ್ವಸ್ಥ ಮಂಡಳಿ

ಕೆ.ವಿ.ಗೋಪಾಲಕೃಷ್ಣ – ಚೇರ್‌ಮನ್ ಟ್ರಸ್ಟೀ
ಮುರಳಿ ಎಸ್. ಕಾಕೋಳು – ಮ್ಯಾನೇಜಿಂಗ್ ಟ್ರಸ್ಟೀ

ಟ್ರಸ್ಟೀಗಳು
ಕೆ. ಎಸ್ ಶ್ರೀಹರಿ । ಪವನ್ ವಿ. ರಾವ್ । ಕೆ. ಆರ್ ಮುರಳೀಧರ್ । ಜೆ. ಹೆಚ್ ಮದನ್ ಶ್ರೀನಿವಾಸ್
ಗುರುರಾಜ ಪೋಶೆಟ್ಟಿಹಳ್ಳಿ । ನಾಗುಶ್ರೀನಿವಾಸ್ ಕೆ. ಎನ್. । ಕೆ. ಪಿ. ಪ್ರಸನ್ನ ಶ್ರೀನಿವಾಸ್ । ಸುಧ ಕೆ. ರಾವ್

ಸಹಯೋಗ

ಪಾಂಚಜನ್ಯ ಪ್ರತಿಷ್ಠಾನ
www.panchajanya.org

ಕೆನರಾ ಬ್ಯಾಂಕ್ केनरा बैंक Canara Bank

ಕಾಕೋಳು ಹಾಲು ಉತ್ಪಾದಕರ ಸಹಕಾರ ಸಂಘ (ನಿ)

ಭಜನೆ–ಪ್ರವಚನ–ಸಂಗೀತ ಕಾರ್ಯಕ್ರಮಗಳ
ಪ್ರಾಯೋಜಕರು ತಿರುಮಲ ತಿರುಪತಿ ದೇವಸ್ಥಾನದ
ಹಿಂದೂಧರ್ಮ ಪ್ರಚಾರ ಪರಿಷತ್

ಪ್ರಚಾರ ಮುದ್ರಣ ಬರವಣಿಗೆ
ಮೀಡಿಯಾ ಹೌಸ್ ಪ್ರಕಾಶನ
97393 69621

ಬ್ರಹ್ಮರಥೋತ್ಸವ 91 ವಸಂತದ ಸಂಭ್ರಮ
ಅಷ್ಟಮಿಪ್ರಿಯನ ಅವಿಸ್ಮರಣೀಯ ಉತ್ಸವ...


**ಕಾಕೋಳು ಕ್ಷೇತ್ರಕ್ಕೆ ಭೇಟಿ – ಪುಣ್ಯ ಆಗುವುದು ಕೋಟಿ**

## ಕಾರ್ಯಕ್ರಮಗಳ ವಿವರ




### ಏಪ್ರಿಲ್ 11, 2024 ಗುರುವಾರ ಚೈತ್ರ ಶುದ್ಧ ತೃತೀಯ

**ಬೆಳಗ್ಗೆ 7.30:** ದೇವಸ್ಥಾನದ ಮುಂಭಾಗದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶಿಲಾಮಯ ಸಿಂಹದ್ವಾರದ ಉದ್ಘಾಟನೆ:
ಸೋಸಲೆ ಶ್ರೀ ವ್ಯಾಸರಾಜ ಮಠದ ಪರಮಪೂಜ್ಯ ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದರು



**ಬೆಳಗ್ಗೆ 8.30:** ಶ್ರೀ ಸುದರ್ಶನ ಹೋಮ, **ಬೆಳಗ್ಗೆ 9.30:** ಭಜನೆ – ಶ್ರೀಹರಿ ಭಜನಾಮಂಡಳಿ



**ಸಂಜೆ 4.00:** ಗರುಡ ಬುತ್ತಿ ಸೇವಾಕರ್ತರಿಂದ ಸಂಕಲ್ಪ, ಪಲ್ಲಕ್ಕಿ ಉತ್ಸವ
**ಸಂಜೆ 5.00:** ಅಂಕುರಾರ್ಪಣೆ, ಧ್ವಜಾರೋಹಣ, ಸಂತಾನಾಪೇಕ್ಷಿಗಳಿಗೆ ಗರುಡಬುತ್ತಿ, ತೊಟ್ಟಿಲು ಪೂಜೆ, ಅಶ್ವವಾಹನೋತ್ಸವ

### ಏಪ್ರಿಲ್ 12, 2024 ಶುಕ್ರವಾರ ಚೈತ್ರ ಶುದ್ಧ ಚತುರ್ಥಿ



**ಬೆಳಗ್ಗೆ 10.00 :** ನಾಮಸಂಕೀರ್ತನೆ: ಆಖಣಶ್ಮ ಭಜನಾ ಮಂಡಳಿ
**ಬೆಳಗ್ಗೆ 11.00 :** ಗಜೇಂದ್ರ ಮೋಕ್ಷ ಉತ್ಸವ
ಪ್ರವಚನ : ಮ.ಶಾ.ಸಂ.ವಿ|| ಕಲ್ಲಾಪುರ ಪವಮಾನಾಚಾರ್ಯರು, ಧಾರ್ಮಿಕ ಚಿಂತಕರು



**ಸಂಜೆ 5.30 :** ವೈಭವದ ಪರಮ ಮಂಗಳಕರ ಮಹಾ ಕಲ್ಯಾಣೋತ್ಸವ

### ಏಪ್ರಿಲ್ 13, 2024 ಶನಿವಾರ ಚೈತ್ರ ಶುದ್ಧ ಪಂಚಮಿ




**ಬೆಳಗ್ಗೆ 9.00 :** ಗರುಡೋತ್ಸವ
**ಬೆಳಗ್ಗೆ 10.30 :** ಅಷ್ಟಾವಧಾನ, ಮಂಟಪ್ಪಡಿ
ವಿವಿಧ ಭಜನಾ ಮಂಡಳಿಗಳ ಭಗವನ್ನಾಮ ಸಂಕೀರ್ತನೆ – ಗ್ರಾಮ ಪ್ರದಕ್ಷಿಣೆ, ಮಹಾರಥಾರೋಹಣ



**91 ನೇ ಬ್ರಹ್ಮರಥೋತ್ಸವ** – ಅನ್ನ ಸಂತರ್ಪಣೆ
**ಸಂಜೆ 6.00 :** ಧೂಳಿಕೋತ್ಸವ
ವಿದ್ಯುತ್ ದೀಪಾಲಂಕೃತ ರಥೋತ್ಸವ




ಸುಸ್ವರ ನಾದಸ್ವರ ಮತ್ತು ಸ್ಯಾಕ್ಸೋಫೋನ್ ವಾದನ
ವಿದ್ವಾನ್ ಪ್ರಸಾದ್ ಮತ್ತು ವೃಂದ

### ಏಪ್ರಿಲ್ 14, 2024 ಭಾನುವಾರ ಚೈತ್ರ ಶುದ್ಧ ಷಷ್ಠಿ



**ಬೆಳಗ್ಗೆ 10.00 :** ನಾದ ನೀರಾಜನ: ವಿದುಷಿ ಸಂಧ್ಯಾ ಶ್ರೀನಾಥ್ ಮತ್ತು ತಂಡ
**ಬೆಳಗ್ಗೆ 11.00:** ಪುಣ್ಯಕಥಾ ಸಮಯ:
ಮ.ಶಾ.ಸಂ ವಿ|| ಎಲ್.ಎಸ್. ಬ್ರಹ್ಮಣ್ಯಾಚಾರ್ಯರು, ಖ್ಯಾತ ಅಧ್ಯಾತ್ಮ ಚಿಂತಕರು



**ಮಧ್ಯಾಹ್ನ 11.30 :** ವಸಂತೋತ್ಸವ (ಉತ್ಸವ ಮೂರ್ತಿಗಳಿಗೆ ಅವಭೃತ ಸ್ನಾನ)
**ಸಂಜೆ 6.00 :** ಧ್ವಜಾವರೋಹಣ, ಮೃಗಯಾತ್ರೋತ್ಸವ – ಶಯನೋತ್ಸವ

### ಏಪ್ರಿಲ್ 17, 2024 ಬುಧವಾರ ಚೈತ್ರ ಶುದ್ಧ ನವಮಿ




**ಬೆಳಗ್ಗೆ 10.00 :** ಶ್ರೀರಾಮನವಮಿ ಪ್ರಯುಕ್ತ ಹನುಮಂತೋತ್ಸವ
**ಸಂಜೆ 6.00 :** ಸರ್ವ ಸಮರ್ಪಣೋತ್ಸವ

ಪ್ರತಿದಿನ ಪ್ರಾತಃ ಕಾಲ : ಸುಪ್ರಭಾತ, ಪಂಚಾಮೃತ ಅಭಿಷೇಕ, ವ್ಯಾಸ–ದಾಸ ವಾಙ್ಮಯ ಕೃತಿಗಳ ಪಾರಾಯಣ, ಪಾನಕ ಪೂಜೆ, ಗೋಪೂಜೆ. ಮಧ್ಯಾಹ್ನ ಮತ್ತು ರಾತ್ರಿ : ಮಹಾಮಂಗಳಾರತಿ ಹಾಗೂ ತೀರ್ಥ ಪ್ರಸಾದ

## ಸಂತಾನ ಪ್ರಾಪ್ತಿಗೆ ಕಾಕೋಳು ವೇಣುಗೋಪಾಲನ ಸೇವೆ ಮಾಡಲು ಬನ್ನಿ



ಕೃಪಾಳು ವೇಣುಗೋಪಾಲ ನೆಲೆಸಿರುವ ಕಾಕೋಳನಲ್ಲಿ ಪ್ರತಿವರ್ಷ ಚೈತ್ರ ಮಾಸದಲ್ಲಿ ನಡೆಯುವ ವಾರ್ಷಿಕ ಬ್ರಹ್ಮರಥೋತ್ಸವದ ಶುಭಾರಂಭದ ಗರುಡ ಧ್ವಜಾರೋಹಣ ಸಮಯದಲ್ಲಿ ಭಕ್ತಾಭಿಷ್ಟಪ್ರದನಾದ ರುಕ್ಮಿಣಿ ಸತ್ಯಭಾಮ ಸಹಿತ ಶ್ರೀ ವೇಣುಗೋಪಾಲಕೃಷ್ಣನನ್ನು ಅನನ್ಯ ಭಕ್ತಿ ಶ್ರದ್ಧೆಗಳಿಂದ ಪ್ರಾರ್ಥಿಸಿ ಗರುಡ ಬುತ್ತಿಯನ್ನು ಸ್ವೀಕರಿಸಿ ತೊಟ್ಟಿಲುಪೂಜೆ ಮಾಡಿದರೆ ಉತ್ತಮ ಸಂತಾನ ಪ್ರಾಪ್ತಿಯಾಗುವುದೆಂಬ ಪರಂಪರಾನುಗತ ನಂಬಿಕೆ ಬೆಳೆದು ಬಂದಿದೆ. ಇದೇ **ಏಪ್ರಿಲ್ 11, 2024 ಗುರುವಾರ** ಚೈತ್ರ ಶುದ್ಧ ತದಿಗೆಯ ಗೋಧೂಳಿ ಲಗ್ನದಲ್ಲಿ ಗರುಡ ಬುತ್ತಿಯನ್ನು ನೀಡಲಾಗುತ್ತದೆ. **ವಿವರಗಳಿಗೆ: 94839 68101**

ಈ ಪೂಜಾಕೈಂಕರ್ಯವನ್ನು ವೀಕ್ಷಿಸಿ : Kakolu Krishna Temple Garuda Butthi Episode Youtube

ಭಕ್ತರು ತಮ್ಮ ಭಕ್ತಿಯ ಕೊಡುಗೆಗಳನ್ನು ಈ ಕೆಳಕಂಡಂತೆ ತುಳಸಿದಳ ಪೂರ್ವಕವಾಗಿ ಸಮರ್ಪಿಸಬಹುದು.

### ಸೇವಾ ವಿವರ

- ಒಂದು ದಿನದ ಪೂರ್ಣ ಸೇವಾ – ರೂ. 1,00,000/–
- ಬ್ರಹ್ಮರಥೋತ್ಸವ ಅಲಂಕಾರ ಸೇವಾ – ರೂ. 75,000/–
- ಪುಷ್ಪಾಲಂಕಾರ ಸೇವಾ – ರೂ. 50,000/–
- ಯಜ್ಞ ಪುರುಷಾರಾಧನೆ – ರೂ. 25,000/–
- ಮಹಾಕಲ್ಯಾಣೋತ್ಸವ ಸೇವಾ – ರೂ. 15,000/–
- ಪಾರಾಯಣ ಸೇವಾ – ರೂ. 10,000/–
- ಸಾಮೂಹಿಕ ಹೋಮ ಸಂಕಲ್ಪ ಸೇವಾ – ರೂ. 2,000/–
- ಗರುಡಬುತ್ತಿ, ತೊಟ್ಟಿಲು ಪೂಜೆ (ಸಂತಾನಾಪೇಕ್ಷಿಗಳಿಗೆ) – ರೂ 1,000/–
- ನವನೀತ(ಬೆಣ್ಣೆ) ಅಲಂಕಾರ ಸೇವಾ – ರೂ 750/–
- ಪ್ರಾಕಾರೋತ್ಸವ (ಏಪ್ರಿಲ್ 11 ಮಾತ್ರ) – ರೂ. 500/–
- ಫಲಪಂಚಾಮೃತ ಅಭಿಷೇಕ – ರೂ.300/–

ಬಹುತೇಕ ಭಕ್ತಾದಿಗಳ ಸರಿಯಾದ ವಿಳಾಸ, ಬದಲಾದ ವಿಳಾಸಗಳು ಲಭ್ಯವಿಲ್ಲದ ಕಾರಣ ಆಮಂತ್ರಣ ಪತ್ರಿಕೆಯನ್ನು ವಾಟ್ಸ್ಆಪ್‌ಗೆ ಕಳುಹಿಸಲಾಗುತ್ತದೆ.

ಜೂನ್ 22, 2024 ಶನಿವಾರ ಕಾಕೋಳು ಕ್ಷೇತ್ರದಲ್ಲಿ
ಶ್ರೀ ಶ್ರೀಪಾದರಾಜರ ಉತ್ತರಾಧನಾ ಆಚರಿಸಲಾಗುವುದು.
ಪ್ರಧಾನ ಸೇವಾಕರ್ತರು : ದಿ.ಹೊಳವನಹಳ್ಳಿ ನಾಗರಾಜಮೂರ್ತಿ & ಕುಟುಂಬ

### ಶ್ರೀಕರನ ಸೇವೆಗೊಂದು ಸುವರ್ಣಾವಕಾಶ

ತಮ್ಮ ಸ್ವಯಂಪ್ರೇರಿತ ಸೇವಾಕಾಣಿಕೆಗಳನ್ನು ನೇರವಾಗಿ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಬಯಸುವರು ಕೆಳಕಂಡ ಬ್ಯಾಂಕ್ ಖಾತೆಗೆ ವರ್ಗಾಯಿಸಿ ಅಧಿಕೃತ ರಸೀದಿ ಪಡೆಯಬಹುದು.

**Bank account details**


Kakolu Sri Venugopalaswamy Devastana Trust
**Canara Bank**
**(Rajanukunte Branch)**
**SB A/c No : 04342010037855**
**IFSC code : CNRB0004788**

BHIM UPI

ಪಾವತಿಸಿದ ನಂತರ ವಿವರಗಳನ್ನು SMS / Whatsapp ಮೂಲಕ ಪೂರ್ತಿ ಹೆಸರು, ಬ್ಯಾಂಕಿನ ಹೆಸರು, ಸೇವಾ ದಿನಾಂಕವನ್ನು 98450 75250 ಸಂಖ್ಯೆಗೆ ಕಳುಹಿಸಿ.

**ಭಕ್ತಾದಿಗಳು ನಮೂದಿಸಲಾದ ಸೇವಾ ಕಾಣಿಕೆ ಮೊತ್ತವಲ್ಲದೆ ತಮ್ಮ ಶಕ್ತ್ಯಾನುಸಾರ ದೇಣಿಗೆ ನೀಡಬಹುದು.**

### ಬೆಂಗಳೂರಿನಿಂದ ಬಸ್ ಮಾರ್ಗ




ಕೃಷ್ಣರಾಜೇಂದ್ರ ಮಾರುಕಟ್ಟೆಯಿಂದ 285ಇ (ಗುಟ್ಟಹಳ್ಳಿ ಮಾರ್ಗ), 285ಎಲ್ (ಕಾಕೋಳು ಮಾರ್ಗ) ಚಲ್ಲಹಳ್ಳಿ, 285 ಆರ್ (ಕಾಕೋಳು ಮಾರ್ಗ) ಹನಿಯೂರು, 285ಎಂ (ಕಾಕೋಳು ಮಾರ್ಗ).ಬಾಪೂಜಿನಗರದಿಂದ 248ಕ್ಯೂ (ಪೀಣ್ಯ, ಜಾಲಹಳ್ಳಿ ಕ್ರಾಸ್ ಮಾರ್ಗ), ಮೆಜೆಸ್ಟಿಕ್– ನೆಲಮಂಗಲ 406 (ಕಾಕೋಳು ಮಾರ್ಗ).

ದೇವಾಲಯದ ಆವರಣದಲ್ಲಿ ಎಲ್ಲಾ ರೀತಿಯ ಕಾರ್ಯಕ್ರಮ ನಡೆಸಲು ಕನಿಷ್ಠ 400 ಜನರ ಸಾಮರ್ಥ್ಯವಿರುವ ಸುಸಜ್ಜಿತವಾದ "ಪಾಂಚಜನ್ಯ" ಸಭಾಂಗಣ ಲಭ್ಯ.

ಬ್ರಹ್ಮರಥೋತ್ಸವ 91ನೇ ವಸಂತದ ಸಂಭ್ರಮ

ಅಷ್ಟಮಿಪ್ರಿಯನ ಅವಿಸ್ಮರಣೀಯ ಉತ್ಸವ...

ಗೋಸಂರಕ್ಷಣೆಯ ಅಂಗವಾಗಿ ನಂದಗೋಕುಲ ಗೋಶಾಲೆ ನಡೆಯುತ್ತಿದ್ದು ಗೋದಾನ ಮತ್ತು ಅದರ ನಿರ್ವಹಣೆ ಕುರಿತು ಆಸಕ್ತರು, ಕಾರ್ಯಕ್ರಮ ಪ್ರಾಯೋಜಿಸಲು ಆಸಕ್ತಿವುಳ್ಳ ಸೇವಾಕರ್ತರು ಹೆಚ್ಚಿನ ಮಾಹಿತಿಗೆ ಟ್ರಸ್ಟ್‌ರವರನ್ನು ಸಂಪರ್ಕಿಸಿ.